ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು

ದಿನಾಂಕಃ 05 ನೇ ಫೆಬ್ರುವರಿ ಮಾಹೆ 2022

ಉಪಸ್ಥಿತರುಃ ಶ್ರೀ ಯೋಗೇಶ.ಜೆ. ಬಿ.ಎ.,ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು 1 ನೇ
ಹೆಚ್ಚುವರಿ ಜೆ.ಎಂ.ಎಫ್.ಸಿ ರಾಣೇಬೆನ್ನೂರು

ಓ.ಎಸ್.ನಂ.208/2020

ವಾದಿ : ರಾಘವೇಂದ್ರ ತಂದೆ ಮಹೇಂದ್ರಪ್ಪ ಕಡ್ಡಿಯವರ ಉರ್ಫ್
ಕಡ್ಡಿ, ವಯಸ್ಸುಃ 32 ವರ್ಷ, ಉಃ ವ್ಯವಸಾಯ,
ವಾಸಃ ಯರೆಕೊಪ್ಪಿ, ತಾಃ ರಾಣೆಬೆನ್ನೂರು, ಜಿಃ ಹಾವೇರಿ.

(ಅರ್ಜಿದಾರರ ಪರವಾಗಿ ಶ್ರೀ ಪಿ.ಆರ್.ಕೆ., ವಕೀಲರು)

ವಿರುದ್ಧ

ಪ್ರತಿವಾದಿ :1. ಮಂಜುನಾಥ ತಂದೆ ಲಕ್ಷ್ಮಣ್ ಯರೆಸೀಮಿ,
ವಯಸ್ಸುಃ 32 ವರ್ಷ, ಉಃ ವ್ಯವಸಾಯ,
ವಾಸಃ ಯರೆಕೊಪ್ಪಿ, ತಾಃ ರಾಣೆಬೆನ್ನೂರು, ಜಿಃ ಹಾವೇರಿ.

2. ಲಕ್ಷ್ಮಣ್ ತಂದೆ ಬಸಪ್ಪ ಯರೆಸೀಮಿ,
ವಯಸ್ಸುಃ 55 ವರ್ಷ, ಉಃ ವ್ಯವಸಾಯ,
ವಾಸಃ ಯರೆಕೊಪ್ಪಿ, ತಾಃ ರಾಣೆಬೆನ್ನೂರು, ಜಿಃ ಹಾವೇರಿ.

(ಪ್ರತಿವಾದಿಗಳ ಪರವಾಗಿ ಶ್ರೀ ಎಸ್.ಬಿ.ಎ., ವಕೀಲರು)

ಮಧ್ಯಂತರ ಅರ್ಜಿ ಸಂಖ್ಯೆ 1

ಅರ್ಜಿದಾರ : ರಾಘವೇಂದ್ರ ತಂದೆ ಮಹೇಂದ್ರಪ್ಪ ಕಡ್ಡಿಯವರ ಉರ್ಫ್ ಕಡ್ಡಿ

ವಿರುದ್ಧ

ಎದುರುದಾರ : ಮಂಜುನಾಥ ತಂದೆ ಲಕ್ಷ್ಮಣ್ ಯರೆಸೀಮಿ,

ಪ್ರದಾನ ದಿವಾಣಿ ನ್ಯಾಯಾಧೀಶರು ಮತ್ತು
1 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು.

ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲೆ ಆದೇಶ

ಅರ್ಜಿದಾರ/ವಾದಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಈ ಅರ್ಜಿಯನ್ನು ಸಲ್ಲಿಸುತ್ತಾ, ವಾದಿಯ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ಎದುರುದಾರರು ಅಡ್ಡಿಪಡಿಸದಂತೆ ತಾತ್ಕಾಲಿಕ ನಿರ್ಭಂದಾಜ್ಞೆ ಆದೇಶವನ್ನು ನೀಡಬೇಕೆಂದು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಲಾದ ಅಂಶಗಳ ಸಂಕ್ಷಿಪ್ತ ಸಾರಾಂಶವೇನೆಂದರೆ, ದಾವಾ ಪತ್ರದ ಜೊತೆಗೆ ಹಸ್ತ ನಕ್ಷೆಯಲ್ಲಿ ನಮೂದಿಸಲಾದ ಆಸ್ತಿಯಲ್ಲಿ ವಾದಿ ಮತ್ತು ವಾದಿ ಕುಟುಂಬದವರು ವಾಸವಾಗಿರುತ್ತಾರೆ. ವಾದಿಯು ದಾವಾ ಆಸ್ತಿಯ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ದಾವಾ ಆಸ್ತಿಯು ಖಾಲಿ ನಿವೇಶನವಾಗಿರುತ್ತದೆ. ದಾವಾ ಆಸ್ತಿಯು ವಾದಿಯ ಅಜ್ಜನ ಹೆಸರಿಗೆ 1956 ನೇ ಇಸವಿಯಲ್ಲಿ ಮಂಜೂರಾಗಿದ್ದು ಇರುತ್ತದೆ. ಅಂದಿನಿಂದ ವಾದಿಯ ಅಜ್ಜ ದಾವಾ ಆಸ್ತಿಯಲ್ಲಿ ಹುಲ್ಲಿನ

ಬಣವೆ, ಕಟ್ಟೆಗೆ ಹಾಕಿಕೊಂಡು ದನದ ಕೊಟ್ಟೆಗೆ ಕಟ್ಟಿಕೊಂಡು ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಪ್ರತಿವಾದಿಗಳು ಎರೆಕೊಪ್ಪಿ ಗ್ರಾಮದ ವಾಸಿಯಾಗಿದ್ದು, ವಾದಿಯ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ಅಡ್ಡಿ ಪಡಿಸದಂತೆ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಅರ್ಜಿದಾರರು ಸಲ್ಲಿಸಲಾಗಿರುವ ಅರ್ಜಿಯನ್ನು ದಾಖಲಿಸಿಕೊಂಡು ಎದುರುದಾರರಿಗೆ ಸಮನ್ಸ ನೀಡಲಾಗಿ ಎದುರುದಾರು ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ. ಅರ್ಜಿದಾರರು ಸಲ್ಲಿಸಲಾದ ಅರ್ಜಿಗೆ ತಮ್ಮ ದಾವಾ ಪತ್ರಕ್ಕೆ ಸಲ್ಲಿಸಲಾದ ತಕರಾರನ್ನೇ ವಾದಿಗಳ ಅರ್ಜಿಗೆ ತಕರಾರು ಎಂದು ಪರಿಗಣಿಸಬೇಕೆಂದು ಕೋರಿರುತ್ತಾರೆ. ಎದುರುದಾರರರ ಕೋರಿಕೆಯನ್ನು ಪರಿಗಣಿಸಲಾಗಿರುತ್ತದೆ. ಎದುರುದಾರರು ತಮ್ಮ ತಕರಾರಿನಲ್ಲಿ ಹೇಳಲಾದ ಅಂಶಗಳ ಸಂಕ್ಷಿಪ್ತ ಸಾರಾಂಶ ಏನೆಂದರೆ, ವಾದಿಯು ಹಸ್ತ ನಕ್ಷೆಯಲ್ಲಿ ಯಾವುದೇ ಅಳತೆಯನ್ನು ನಮೂದಿಸಿರುವುದಿಲ್ಲ. ಆದುದರಿಂದ ಹಸ್ತ ನಕ್ಷೆಯನ್ನು ವಾದ ಪತ್ರದ ಒಂದು ಭಾಗವೆಂದು ಪರಿಗಣಿಸಲು ಬರುವುದಿಲ್ಲ. ವಾದಿಯ ದಾವಾ ಆಸ್ತಿಗೆ ಸಂಬಂಧಿಸಿದಂತೆ ಒಬ್ಬನೇ ಮಾಲೀಕರಾಗಿ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಒಟ್ಟು 9 ಜನ ಸಾಮೂಹಿಕವಾಗಿ ಮಾಲೀಕರಾಗಿ ಇರುತ್ತಾರೆ. ಅವರುಗಳನ್ನು ಈ ದಾವೆಯಲ್ಲಿ ಸೇರಿಸದೇ ವಾದಿ ಒಬ್ಬನೇ ಈ ದಾವೆಯನ್ನು ಸಲ್ಲಿಸಿಕೊಂಡು ಬಂದಿರುವುದರಿಂದ ವಾದಿಯ ದಾವೆಯು ಊರ್ಜಿತವಾಗುವುದಿಲ್ಲ. ವಾದಿಯು ತನ್ನ ಕುಟುಂಬದ ಸದಸ್ಯರ

ಜೊತೆ ಸಮೂಹಿಕವಾಗಿ ಉಪಯೋಗ ಮಾಡುತ್ತಾ ಬಂದಿರುತ್ತಾರೆ ಹಾಗೂ ದಾವಾ ಆಸ್ತಿಯಲ್ಲಿ ಮೇವು ಕಟ್ಟಿಗೆ ಶೇಕರಿಸಿಕೊಂಡು ಬಂದಿರುತ್ತಾರೆ ಎಂಬುದು ಸಂಪೂರ್ಣವಾಗಿ ಸುಳ್ಳು ಇರುತ್ತದೆ. ವಾದಿ ಮತ್ತು ವಾದಿಯ ಕುಟುಂಬದ ಸದಸ್ಯರ ಮೂಲ ಪುರುಷನಿಗೆ ಪ್ರತಿವಾದಿಗಳ ಆಸ್ತಿಯ ಪೂರ್ವಕ್ಕೆ ಪ್ಲಾಟ್ ನಂ.1 ರ ಆಸ್ತಿ ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಆಸ್ತಿಯನ್ನು ಹೊರತುಪಡಿಸಿ ವಾದಿಯ ಪಶ್ಚಿಮ ಜಾಗದಲ್ಲಿ ಯಾವುದೇ ಖಾಲಿ ಜಾಗ ಇರುವುದಿಲ್ಲ. ಆ ಖುಲ್ಲಾ ಜಾಗವು ಪ್ರತಿವಾದಿಗೆ ಸೇರಿದ ಆಸ್ತಿ ಇದ್ದು, ಸದರಿ ಆಸ್ತಿಯನ್ನು ಪ್ರತಿವಾದಿ 14 ವರ್ಷಗಳಿಂದ ತಮ್ಮ ವಹಿವಾಟಿನಲ್ಲಿ ಇಟ್ಟುಕೊಂಡು ಅಭಿವೃದ್ಧಿಪಡಿಸುತ್ತಾ ಬಂದಿರುತ್ತಾರೆ. ಸದರಿ ಆಸ್ತಿಯನ್ನು ವಾದಿಯು ದಾವಾ ಆಸ್ತಿ ಎಂದು ನಿರ್ಧರಿಸಲು ಸದರಿ ಆಸ್ತಿಯ ಮೇಲೆ ಯಾವುದೇ ಹಕ್ಕು, ಅಧಿಕಾರ ವಾದಿಗೆ ಇರುವುದಿಲ್ಲ. ಆದುದರಿಂದ ವಾದಿಯು ಸಲ್ಲಿಸಿರುವ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಪ್ರತಿವಾದಿಗಳು ಕೋರಿಕೊಳ್ಳುತ್ತಾರೆ. ಪ್ರತಿವಾದಿಗಳು ಮುಂದುವರೆದು ಹೇಳುವುದೇನೆಂದರೆ, ದಾವಾ ಆಸ್ತಿಯು ವಾದಿ ಮತ್ತು ವಾದಿಯ ಕುಟುಂಬದ ಸದಸ್ಯರ ಸಾಮೂಹಿಕವಾದ ಸರ್ವೆ ನಂ. 50 ಎ/1 ಕ ರಲ್ಲಿ ಪ್ಲಾಟ್ ನಂ. 1 ಇದರ ಕ್ಷೇತ್ರ 4 ಗುಂಟೆ ಇದ್ದು, ಸದರಿ ಆಸ್ತಿಯ ಪಶ್ಚಿಮ ದಿಕ್ಕಿಗೆ ಇರುವ ಆಸ್ತಿಯು ಸರ್ಕಾರದ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ತಮ್ಮ ಹಿರಿಯರ ಕಾಲದಿಂದಲೂ ಮನೆಯನ್ನು ಕಟ್ಟಿಕೊಂಡು ವಾಸ ಇರುತ್ತಾರೆ. ಸದರಿ ಆಸ್ತಿಯನ್ನು ತಮ್ಮ ಹೆಸರಿಗೆ ಮಂಜೂರು ಮಾಡುವ ಕುರಿತು ತಹಶೀಲ್ದಾರ ಇವರಿಗೆ ಅರ್ಜಿಯನ್ನು ನೀಡಿದ್ದು ಇರುತ್ತದೆ. ಆದುದರಿಂದ ಸದರಿ ಆಸ್ತಿಯಲ್ಲಿ ಈ ದಾವೆಯ

ವಾದಿಯು ಯಾವುದೇ ಹಕ್ಕು ಅಧಿಕಾರ ಹಿತಾಸಕ್ತಿ ವಗೈರೆ ಇರುವುದಿಲ್ಲ. ಅದುದರಿಂದ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದ ಹಸ್ತ ನಕ್ಷೆಯಲ್ಲಿ ನಮೂದಿಸಿರುವಂತೆ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. ಆದುದರಿಂದ ವಾದಿಯು ಸಲ್ಲಿಸಿರುವ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೋರಿಕೊಳ್ಳುತ್ತಾರೆ.

4. ಅರ್ಜಿದಾರರು ಸಲ್ಲಿಸಲಾದ ಅರ್ಜಿ ಹಾಗೂ ಈ ದಾವೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಈ ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಲಾಯಿತು, ಈ ಅರ್ಜಿಯನ್ನು ನಿರ್ಧರಿಸಲು ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

ಅಂಶಗಳು

1. ವಾದಿಯು ಈ ದಾವೆಯನ್ನು ಮೇಲ್ನೋಟಕ್ಕೆ ರುಜುವಾತು ಪಡಿಸುತ್ತಾರೆಯೇ ?
2. ವಾದಿಯು ಈ ದಾವೆಯಲ್ಲಿ ಅನುಕೂಲತೆಯ ಸಮತೋಲನವು ತಮ್ಮ ಪರವಾಗಿದೆ ಎಂಬುದನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸುತ್ತಾರೆಯೇ ?
3. ವಾದಿಯು ಈ ಅರ್ಜಿಯಲ್ಲಿ ಕೋರಲಾದ ಪರಿಹಾರವನ್ನು ನೀಡದಿದ್ದ ಸಂದರ್ಭದಲ್ಲಿ ವಾದಿಗೆ ತುಂಬಲಾರದ ನಷ್ಟ ಅಥವಾ ಹಾನಿ ಉಂಟಾಗುತ್ತದೆ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?
4. ಯಾವ ಆದೇಶ ಅಥವಾ ಡಿಕ್ರಿ ?

5. ಅರ್ಜಿದಾರ ಪರ ವಕೀಲರ ವಾದವನ್ನು ಆಲಿಸಲಾಯಿತು, ಈ ದಾವೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು, ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ ಸಂಖ್ಯೆ : 1 : ನಕಾರಾತ್ಮಕವಾಗಿ
ಅಂಶ ಸಂಖ್ಯೆ : 2 : ನಕಾರಾತ್ಮಕವಾಗಿ
ಅಂಶ ಸಂಖ್ಯೆ : 3 : ನಕಾರಾತ್ಮಕವಾಗಿ
ಅಂಶ ಸಂಖ್ಯೆ : 4 : ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

6. **ಅಂಶ ಸಂಖ್ಯೆ 1 ರಿಂದ 3**:- ಸದರಿ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಂಡಿರುತ್ತೇನೆ. ವಾದಿಯು ದಾವಾ ಪತ್ರದ ಜೊತೆಗೆ ಲಗತ್ತಿಸಿದ ಹಸ್ತ ನಕ್ಷೆಯಲ್ಲಿ ನಮೂದಿಸಲಾದ ಎಬಿಸಿಡಿ ಆಸ್ತಿಯು ವಾದಿಗೆ ಅವರ ಪೂರ್ವಜರ ಕಾಲದಿಂದಲೂ ಅಂದರೆ 1956 ನೇ ಇಸವಿಯಿಂದಲೂ ವಾದಿಯ ಅಜ್ಜನಿಗೆ ಮಂಜೂರಾಗಿರುವುದರಿಂದ ಅಂದಿನಿಂದ ವಾದಿಗಳು ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದು ಹುಲ್ಲಿನ ಮೆದೆ, ಕಟ್ಟಿಗೆ ಶೇಕರಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಸದರಿ ಅಂಶಗಳನ್ನು ಎದುರುದಾರರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ದಾವಾ ಆಸ್ತಿಯು ಸರ್ಕಾರಕ್ಕೆ ಸೇರಿದ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧವಾಗಿ ವಾದಿಯು ಸಲ್ಲಿಸಿರುವ ಸರ್ವೆ ನಂ. 50/ಅ/1 ಕ/1 ರ ಆಸ್ತಿಯು ವಾದಿಯ ಜೊತೆ ಉಳಿದ 9 ಜನರ ಹೆಸರಿನಲ್ಲಿ ಖಾತೆ ಇರುವುದು ಕಂಡುಬರುತ್ತದೆ.

ವಾದಿಯು ಸಲ್ಲಿಸಿರುವ ದಾಖಲೆಗಳು ಮತ್ತು ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಗಳು ಮನೆಯನ್ನು ಕಟ್ಟಿಕೊಂಡು ವಾಸವಾಗಿರುವುದು ಕಂಡುಬರುತ್ತದೆ. ಆದರೆ ವಾದಿಯು ದಾವಾ ಶೆಡ್ಯೂಲ್‌ನಲ್ಲಿ ನಮೂದಿಸಲಾದ ಎಬಿಸಿಡಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕೇವಲ ಕಂದಾಯ ದಾಖಲೆಗಳನ್ನು ಹಾಜರುಪಡಿಸಿದ್ದು, ದಾವಾ ಆಸ್ತಿಯ ಪ್ಲಾಟ್ ನಂ. 1 ರಲ್ಲಿ ಸ್ವಾಧೀನಾನುಭವದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರತಿವಾದಿ ಪರ ವಕೀಲರು ಪ್ರತಿವಾದಿ ಎರೆಕೊಪ್ಪಿ ಗ್ರಾಮದ ಸರ್ವೆ ನಂ. 505/1 ಕ/ಬ ಆಸ್ತಿಗೆ ಸಂಬಂಧಿಸಿದಂತೆ ಹಸ್ತ ನಕ್ಷೆಯನ್ನು ಹಾಜರುಪಡಿಸಿದ್ದು, ಸದರಿ ಹಸ್ತ ನಕ್ಷೆಯಲ್ಲಿ ಒಟ್ಟು 70 ಪ್ಲಾಟ್‌ಗಳನ್ನು ಮಾಡಲಾಗಿದ್ದು, ಅವುಗಳಲ್ಲಿ ವಾದಿಯ ಆಸ್ತಿ ಪ್ಲಾಟ್ ನಂ.1 ಆಗಿದ್ದು, ವಾದಿಯ ಆಸ್ತಿಗೂ ಪ್ರತಿವಾದಿಗಳು ವಹಿವಾಟು ಮಾಡುತ್ತಾ ಇರುವುದಾಗಿ ಹೇಳಲಾದ ಆಸ್ತಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ವಾದಿಯು ದಾವಾ ಆಸ್ತಿಯನ್ನು ಎಬಿಸಿಡಿ ಎಂಬುದಾಗಿ ಮಾತ್ರ ನಮೂದಿಸಿದ್ದು, ಪ್ಲಾಟ್ ನಂ. 1 ರ ಆಸ್ತಿ ಎಲ್ಲಿ ಬರುತ್ತದೆ, ಎಬಿಸಿಡಿ ಆಸ್ತಿ ಎಲ್ಲಿ ಬರುತ್ತದೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆಯನ್ನು ಈ ದಾವೆಯ ವಾದಿಯು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ವಿಫಲರಾಗಿರುತ್ತಾರೆ. ಆದುದರಿಂದ ವಾದಿಗೆ ಸೇರಿದ ಆಸ್ತಿಗಳೂ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇರುವ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದುದರಿಂದ ವಾದಿಯು ಈ ದಾವೆಯನ್ನು ಮೇಲ್ನೋಟಕ್ಕೆ ರುಜುವಾತುಪಡಿಸಲು ವಿಫಲರಾಗಿರುತ್ತಾರೆ ಹಾಗೂ ಅನುಕೂಲತೆಯ ಸಮತೋಲನವು ವಾದಿಯ ಪರವಾಗಿ ಇದೆ ಎಂಬುದು ಮೇಲ್ನೋಟಕ್ಕೆ ಕಂಡುಬರುವುದಿಲ್ಲ.

ಈ ಹಂತದಲ್ಲಿ ವಾದಿಯ ಪರವಾಗಿ ಆದೇಶ ನೀಡದೇ ಇದ್ದ ಸಂದರ್ಭದಲ್ಲಿ ವಾದಿಗೆ ಯಾವುದೇ ರೀತಿಯ ತೊಂದರೆ ಆಗುತ್ತದೆ ಎಂಬುದು ಈ ನ್ಯಾಯಾಲಯದ ಗಣನಗೆ ಬಂದಿರುವುದಿಲ್ಲ. ವಾದಿಯು ತನ್ನ ಆಸ್ತಿಗೆ ಸಂಬಂಧಿಸಿದಂತೆ ನಿಖರವಾಗಿ ಪ್ಲಾಟ್ ನಂ.1 ರ ಆಸ್ತಿಯ ಸರ್ವೆ ನಂ. 50/1 ಕ/1 ಎಲ್ಲಿ ಬರುತ್ತದೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಕೇವಲ ವಾದಿಯು ತನ್ನ ದಾವಾ ಪತ್ರದ ಜೊತೆಗೆ ಎಬಿಸಿಡಿ ಎಂಬುದಾಗಿ ತನ್ನ ಹಸ್ತ ನಕ್ಷೆಯನ್ನು ಹಾಕಿ ಈ ಮಧ್ಯಂತರ ಅರ್ಜಿ 1 ನ್ನು ಸಲ್ಲಿಸಿ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಆದುದರಿಂದ ವಾದಿಯು ಈ ದಾವೆಯನ್ನು ಮೇಲ್ನೋಟಕ್ಕೆ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದುದರಿಂದ ಸದರಿ **ಅಂಶ ಸಂಖ್ಯೆ1 ರಿಂದ 3 ಕ್ಕೆ** ಈ ನ್ಯಾಯಾಲಯವು **ನಕಾರಾತ್ಮಕವಾಗಿ** ಉತ್ತರಿಸಿದೆ.

7. **ಅಂಶ ಸಂಖ್ಯೆ** 4:- ಈ ಮೇಲ್ಕಂಡಂತೆ ಚರ್ಚಿಸಲಾದ ಕಾರಣಗಳಿಗಾಗಿ, ಅಂತಿಮ ಆದೇಶ ಈ ಕೆಳಕಂಡಂತೆ.

ಆದೇಶ

ಅರ್ಜಿದಾರ/ವಾದಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಲಾದ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಖರ್ಚಿನೊಂದಿಗೆ ವಜಾ ಮಾಡಲಾಗಿದೆ.

*(ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ಕೊಟ್ಟು ಅವರು ಗಣಕಯಂತ್ರದ ಮೂಲಕ ಲಿಪ್ಯಂತರ ಮಾಡಿದ ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ 05 **ನೇ ಫೆಬ್ರುವರಿ** 2022 ರಂದು ಘೋಷಿಸಿದ್ದೇನೆ.)*

Sd/-

ಪ್ರದಾನ ದಿವಾಣಿ ನ್ಯಾಯಾಧೀಶರು ಮತ್ತು
1 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು.